ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/28/ನೇ.ವಿ/2026(ಆರ್‌ಪಿಸಿ) ದಿನಾಂಕ: 13.10.2026.

## ಪ್ರಕಟಣೆ

ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ: ಇಡಿ/ಕೆಇಎ/28/ನೇ.ವಿ/2026(ಆರ್‌ಪಿಸಿ), ದಿನಾಂಕ: 03.09.2026 ರಲ್ಲಿ ಅಧಿಸೂಚಿಸಲಾಗಿರುವ ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಯ ಉಳಿದ ಮೂಲ ವೃಂದದ ಗ್ರೂಪ್-ಎ ವೃಂದದ 216 ಪ್ರಾಂಶುಪಾಲರ ನೇರ ನೇಮಕಾತಿ ಕೋಟಾದ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳ ವೇಳಾಪಟ್ಟಿ ಕೆಳಕಂಡಂತಿವೆ.

| ದಿನಾಂಕ ಮತ್ತು ದಿನ | ಹುದ್ದೆ | ಪರೀಕ್ಷೆ | ಸಮಯ | ಒಟ್ಟು ಪ್ರಶ್ನೆಗಳು | ಒಟ್ಟು ಅಂಕಗಳು |
|---|---|---|---|---|---|
| 20-11-2026 (ಶುಕ್ರವಾರ) | ಪ್ರಾಂಶುಪಾಲರು (ಉಳಿದ ಮೂಲ ವೃಂದ) | **ಪತ್ರಿಕೆ-1** | ಮಧ್ಯಾಹ್ನ: 2.30 ರಿಂದ 5.30 ರವರೆಗೆ | 150 | 150 |
| 22-11-2026 (ಭಾನುವಾರ) | | **ಪತ್ರಿಕೆ-2** | ಬೆಳಿಗ್ಗೆ: 10.00 ರಿಂದ 1.00 ರವರೆಗೆ | 150 | 150 |
| | | **ಪತ್ರಿಕೆ-3** | ಮಧ್ಯಾಹ್ನ: 2.30 ರಿಂದ 5.30 ರವರೆಗೆ | 150 | 150 |

- ಪರೀಕ್ಷಾ ಕೇಂದ್ರದಲ್ಲಿ Frisking ಮತ್ತು ಮುಖಚಹರೆ ಪರಿಶೀಲಿಸಿ ಪ್ರವೇಶ ನೀಡುವುದರಿಂದ ಎರಡು ಘಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರದೊಳಗೆ ಹಾಜರಿರತಕ್ಕದ್ದು.
- ಪತ್ರಿಕೆ-1, ಪತ್ರಿಕೆ-2 ಮತ್ತು ಪತ್ರಿಕೆ-3 ರ ಪ್ರಶ್ನೆಗಳು ಬಹು ಆಯ್ಕೆಯ ಪ್ರಕಾರದ್ದಾಗಿರುತ್ತವೆ.
- ಪತ್ರಿಕೆ-1(ಕನ್ನಡ ಭಾಷಾ ಪರೀಕ್ಷೆ):- ಪ್ರಾಂಶುಪಾಲರ ಹುದ್ದೆಯ ಆಯ್ಕೆಗೆ ಅರ್ಹತೆ ಪಡೆಯಲು ಅಭ್ಯರ್ಥಿಯು ಕನ್ನಡ ಭಾಷಾ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಪಡೆಯಬೇಕು. ಕನ್ನಡ ಭಾಷಾ ಪತ್ರಿಕೆಯಲ್ಲಿ ಪಡೆದ ಅಂಕಗಳನ್ನು ಮೆರಿಟ್ ಪಟ್ಟಿಯ ತಯಾರಿಕೆಗೆ ಪರಿಗಣಿಸಲಾಗುವುದಿಲ್ಲ ಮತ್ತು ಅದು ಅರ್ಹತಾ ಸ್ವರೂಪಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಋಣಾತ್ಮಕ ಮೌಲ್ಯಮಾಪನ ಇರುವುದಿಲ್ಲ.
- ಪ್ರಶ್ನೆ ಪತ್ರಿಕೆ-2 (ಸಾಮಾನ್ಯ ಅಧ್ಯಯನ) ಹಾಗೂ ಪ್ರಶ್ನೆ ಪತ್ರಿಕೆ-3(ಆಡಳಿತಾತ್ಮಕ ವಿಷಯ) ರ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಮಾತ್ರ ಮೆರಿಟ್ ಪಟ್ಟಿಯ ತಯಾರಿಕೆಗೆ ಪರಿಗಣಿಸಲಾಗುವುದು. ಸದರಿ ಪತ್ರಿಕೆಗಳಲ್ಲಿ ಋಣಾತ್ಮಕ ಮೌಲ್ಯಮಾಪನವಿದ್ದು, ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿನ ಪ್ರತಿಯೊಂದು ಪ್ರಶ್ನೆಗೂ 04 ಪರ್ಯಾಯ ಉತ್ತರಗಳಿದ್ದು, ಅಭ್ಯರ್ಥಿಯು ಯಾವುದಾದರೂ ಒಂದು ಸರಿ ಉತ್ತರವನ್ನು ಮಾತ್ರ ಆಯ್ಕೆ ಮಾಡತಕ್ಕದ್ದು. ಪ್ರತಿ ತಪ್ಪು ಉತ್ತರಕ್ಕೆ, ಆ ಪ್ರಶ್ನೆಗೆ ನಿಗದಿಪಡಿಸಿರುವ ಅಂಕಗಳ ನಾಲ್ಕನೇ ಒಂದು ಭಾಗದಷ್ಟು (0.25) ಅಂಕಗಳನ್ನು ಕಳೆಯಲಾಗುವುದು.
- ಪತ್ರಿಕೆ-2 ಮತ್ತು ಪತ್ರಿಕೆ-3 ರ ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ 5ನೇ ಆಯ್ಕೆ / ವೃತ್ತವನ್ನು ನೀಡಿದ್ದು, ಉತ್ತರಿಸದೇ ಇರುವ ಪ್ರಶ್ನೆಗಳಿಗೆ ಐದನೇ ಆಯ್ಕೆ/ವೃತ್ತವನ್ನು ಶೇಡ್ ಮಾಡಲು ಕೊನೆಯ ಬೆಲ್ ಆದ ನಂತರ ಹೆಚ್ಚುವರಿಯಾಗಿ ಐದು ನಿಮಿಷಗಳನ್ನು ನೀಡಲಾಗುವುದು. ಯಾವುದೇ ಆಯ್ಕೆಯನ್ನು / ವೃತ್ತವನ್ನು ಶೇಡ್ ಮಾಡಿಲ್ಲದಿದ್ದರೆ, ಪ್ರತಿ ಪ್ರಶ್ನೆಗೆ ನಾಲ್ಕನೇ ಒಂದು ಭಾಗದಷ್ಟು (0.25) ಅಂಕಗಳನ್ನು ಕಡಿತಗೊಳಿಸಲಾಗುತ್ತದೆ.

ಕಾರ್ಯನಿರ್ವಾಹಕ ನಿರ್ದೇಶಕರು

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in